**ಕರ್ನಾಟಕ ಸರ್ಕಾರ**

ಸಂಖ್ಯೆ:ಸಿಆಸುಇ 124 ಆರ್‌ಟಿಐ 2016

ಕರ್ನಾಟಕ ಸರ್ಕಾರದ ಸಚಿವಾಲಯ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ(ಜನಸ್ಪಂದನ)
3ನೇ ಮಹಡಿ, ಪೋಡಿಯಂ ಬ್ಲಾಕ್,
ವಿಶ್ವೇಶ್ವರಯ್ಯ ಮುಖ್ಯ ಗೋಪುರ,
ಬೆಂಗಳೂರು, ದಿನಾಂಕ: 28.09.2016.

**ಸುತ್ತೋಲೆ**

ವಿಷಯ: ಮಾಹಿತಿ ಹಕ್ಕು ಅಧಿನಿಯಮ, 2005ರ ಕಲಂ 19(1)ರಡಿ ಸಲ್ಲಿಸಿದ ಮೊದಲ ಮೇಲ್ಮನವಿಗಳ ವಿಚಾರಣೆಯಲ್ಲಿ ಆದೇಶ ಹೊರಡಿಸುವ ಬಗ್ಗೆ.

ಉಲ್ಲೇಖ:
1. ಸುತ್ತೋಲೆ ಸಂ: ಸಿಆಸುಇ 116 ಆರ್‌ಟಿಐ 2009, ದಿ: 07.07.2010
2. ಸುತ್ತೋಲೆ ಸಂ: ಸಿಆಸುಇ 71 ಆರ್‌ಟಿಐ 2012, ದಿ: 29.06.2012
3. ಸುತ್ತೋಲೆ ಸಂ: ಸಿಆಸುಇ 92 ಆರ್‌ಟಿಐ 2012, ದಿ: 25.08.2012
4. ಸುತ್ತೋಲೆ ಸಂ: ಸಿಆಸುಇ 115 ಆರ್‌ಟಿಐ 2015, ದಿ: 13.08.2015
5. ಸುತ್ತೋಲೆ ಸಂ: ಸಿಆಸುಇ 149 ಆರ್‌ಟಿಐ 2016, ದಿ: 06.08.2016

-----0-----

ಮಾಹಿತಿ ಹಕ್ಕು ಅಧಿನಿಯಮ, 2005ರ ಸಮಗ್ರ ಅನುಷ್ಠನಕ್ಕಾಗಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಉನ್ನತ ಮಟ್ಟದ ಸಮಿತಿಯ 7ನೇ ಸಭೆಯ ನಡವಳಿಯ ಕಂಡಿಕೆ 3ರಲ್ಲಿ ಪ್ರಥಮ ಮೇಲ್ಮನವಿ ಪ್ರಾಧಿಕಾರಿಗಳು ಮಾಹಿತಿ ಹಕ್ಕು ಅಧಿನಿಯಮ 19(1)ರಡಿ ನಿಗದಿಪಡಿಸಿದ ಕಾಲಾವಧಿ 45 ದಿನಗಳ ಒಳಗಾಗಿ ಕಡ್ಡಾಯವಾಗಿ ವಿಚಾರಣೆ ನಡೆಸಿ ಸೂಕ್ತ ಆದೇಶಗಳನ್ನು ತಪ್ಪದೇ ಹೊರಡಿಸುವಂತೆ ಎಲ್ಲಾ ಇಲಾಖೆಗಳಿಗೆ ಸುತ್ತೋಲೆ ಹೊರಡಿಸಲು ನಿರ್ಧರಿಸಲಾಗಿದೆ.

ಸಮಿತಿಯ ತೀರ್ಮಾನದನ್ವಯ ಎಲ್ಲ ಮೊದಲ ಮೇಲ್ಮನವಿ ಪ್ರಾಧಿಕಾರಿಗಳು ಉಲ್ಲೇಖಿತ ಸರ್ಕಾರದ ಸುತ್ತೋಲೆಗಳಲ್ಲಿ ನೀಡಿರುವ ನಿರ್ದೇಶನಗಳನ್ನು ಪಾಲಿಸುವಂತೆ ಹಾಗೂ ಆಯೋಗವು ಗಮನಿಸಿರುವಂತೆ ಮಾಹಿತಿ ಹಕ್ಕು ಅಧಿನಿಯಮ, 2005ರ ಕಲಂ 19(1)ರಡಿ ಸಲ್ಲಿಸಲಾದ ಪ್ರಥಮ ಮೇಲ್ಮನವಿಗಳ ವಿಚಾರಣೆಯ ನಂತರ ಮೇಲ್ಮನವಿ ವಿಚಾರಣಾ ಆದೇಶವನ್ನು ಹೊರಡಿಸುವುದು ಕಡ್ಡಾಯವೆಂದು ತಮ್ಮ ಆಡಳಿತ ಅಧೀನದಲ್ಲಿ ಬರುವ ಎಲ್ಲಾ ಸಾರ್ವಜನಿಕ ಪ್ರಾಧಿಕಾರಗಳ ಮೇಲ್ಮನವಿ ಪ್ರಾಧಿಕಾರಿಗಳಿಗ ಸೂಚಿಸಲು ಕೋರಿದೆ.

(ಪ್ರರಮೇಶ್ ಪಾಂಡೆ),
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಜನಸ್ಪಂದನ)

ಇವರಿಗೆ,
ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/
ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಾಉಇ 123 ಎಂಇಎ 2016

ಕರ್ನಾಟಕ ಸರ್ಕಾರದ ಸಚಿವಾಲಯ,
2ನೇ ಹಂತ, 7ನೇ ಮಹಡಿ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 15.11.2016.

**ಇಂದ:**

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಸಾರ್ವಜನಿಕ ಉದ್ದಿಮೆಗಳ ಇಲಾಖೆ,
ಬೆಂಗಳೂರು-1.

**ಇವರಿಗೆ:**

ಎಲ್ಲಾ ವ್ಯವಸ್ಥಾಪಕ ನಿರ್ದೇಶಕರುಗಳಿಗೆ,

ಮಾನ್ಯರೇ,

**ವಿಷಯ :-** ಮಾಹಿತಿ ಹಕ್ಕು ಅಧಿನಿಯಮ, 2005 ರ ಕಲಂ 19(1) ರಡಿ ಸಲ್ಲಿಸಿದ ಮೊದಲ ಮೇಲ್ಮನವಿಗಳ ವಿಚಾರಣೆಯಲ್ಲಿ ಆದೇಶ ಹೊರಡಿಸುವ ಬಗ್ಗೆ.

**ಉಲ್ಲೇಖ :-** ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಜನಸ್ಪಂದನ) ಇವರ ಸುತ್ತೋಲೆ ಸಂಖ್ಯೆ: ಸಿಆಸುಇ 124 ಆರ್‌ಟಿಐ 2016, ದಿನಾಂಕ 28.09.2016

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸಿಆಸು ಇಲಾಖೆ (ಜನಸ್ಪಂದನ)ಯ ಸುತ್ತೋಲೆ ದಿನಾಂಕ: 28.09.2016 ರ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ. ಸದರಿ ಸುತ್ತೋಲೆಯಲ್ಲಿ ತಿಳಿಸಿರುವಂತೆ, ತಮ್ಮ ನಿಗಮ/ಮಂಡಳಿಗಳಲ್ಲಿನ ಮೊದಲ ಮೇಲ್ಮನವಿ ಪ್ರಾಧಿಕಾರಿಗಳು ಉಲ್ಲೇಖಿತ ಸರ್ಕಾರದ ಸುತ್ತೋಲೆಗಳಲ್ಲಿ ನೀಡಿರುವ ನಿರ್ದೇಶನಗಳನ್ನು ಪಾಲಿಸುವಂತೆ ಹಾಗೂ ಮಾಹಿತಿ ಹಕ್ಕು ಆಯೋಗವು ಗಮನಿಸಿರುವಂತೆ ಮಾಹಿತಿ ಹಕ್ಕು ಅಧಿನಿಯಮ, 2005 ರ ಕಲಂ 19(1) ರಡಿ ಸಲ್ಲಿಸಲಾದ ಪ್ರಥಮ ಮೇಲ್ಮನವಿಗಳ ವಿಚಾರಣೆಯ ನಂತರ ಮೇಲ್ಮನವಿ ವಿಚಾರಣಾ ಆದೇಶವನ್ನು ಹೊರಡಿಸುವುದು ಕಡ್ಡಾಯವೆಂದು ಸಾರ್ವಜನಿಕ ಪ್ರಾಧಿಕಾರಗಳ ಮೇಲ್ಮನವಿ ಪ್ರಾಧಿಕಾರಿಗಳಿಗೆ ತಿಳಿಸಲು ನಾನು ನಿರ್ದೇಶಿತಳಾಗಿದ್ದೇನೆ.

ತಮ್ಮ ವಿಶ್ವಾಸಿ,

S.J. Bhagya 15/11/2016
(ಎಸ್.ಜೆ. ಭಾಗ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ(ಆಡಳಿತ)
ಸಾರ್ವಜನಿಕ ಉದ್ದಿಮೆಗಳ ಇಲಾಖೆ.

15/11